# ಟ್ರಿನ್... ಟ್ರಿನ್... ಟ್ರಿನ್!

■ ಮಲ್ಲಿಕಾರ್ಜುನ ಹುಲಗಬಾಳಿ




'ಟ್ರಿನ್... ಟ್ರಿನ್ ... ಟ್ರಿನ್..'

ಅಲೂ...

'ಹಲೋ'

ಅಲೂ.. ಊ,

ನಮಸ್ಕಾರಾ ಸಾಯೇಬ್ರಿಗೆ,

ಚೆನ್ನಾಗಿದ್ದೀರಾ?

'ನ.. ನ.. ನಮಸ್ಕಾರಾ, ತಾವೂ..?'

ಊಂ... ನಾನೂ ಚೆನ್ನಾಗಿದ್ದೇನ್ರಿ..

'ಅದಲ್ಲ.. ತಾವು ಯಾರೂಂತ..?'

ಏನ್ರೀ ? ಇಷ್ಟ ಜಲ್ದಿ ಮರತ್‌ಬಿಟ್ರಾ ? ನಾನ್ರೀ.. ನಾನು!

'ನಾನು ಅಂತಂದ್ರ?'

ನಾನು ಅಂದ್ರೆ.. ನಾನು, ಅದೇ ನಾನೇರೀ!

'ಅದೇರಿ, ಈ ನಾನು ಅಂದ್ರೆ ಯಾರು? ತಮ್ಮ ಶುಭ ನಾಮ?'

ಹ್ಹಾ.. ! ಹ್ಹಾ..! ನೀವೂ ಭಾಳಾ ಜೋಕ್ ಮಾಡಾವ್ರು ಬಿಡ್ರೀ!

'ಮಾರಾಯ್ರ, ಸುಮ್ ಸುಮ್ನೆ ಯಾಕ ತಲೀ ತಿಂತೀರಿ?'

ಯಾಕ್ರೀ ಅಣ್ಮಂತಪಾ? ನಿನ್ನೆ ಕೋಳಿ ಸಾರು ಬಿರಿಯಾನಿ ಊಟಾ ಮರತ್‌ಬಿಟ್ರಾ?

'ರೀ.. ಮಿಸ್ಟರ್, ನಾನು ಹಣ್ಮಂತಪ್ಪಲ್ಲಾರಿ'

ಸಾಕ್ ಸುಮ್ನಿರ್ರಿ, ಈ ಮುಳ್ಳಗಸಿ ಮಾದೇವಂತಂದ್ರ ಮಳ್ಳ ಮಕಾಸಿ ಅಲ್ಲ!

'ಇಲ್ನೋಡ್ರಿ ಮಿಸ್ಟರ್ ಮುಳ್ಳಗಸಿ, ನಾನು ಹಣಮಂತಪ್ಪ ಅಲ್ಲಾ'

ಅಂಗಾರ ತಾವೂ..?

'ನಾನು.. ನಾನು ವಿಠ್ಠಲ, ಐ ಮೀನ್ ಸಾಹಿತಿ ವಿಠ್ಠಲರಾವ್, ಸಸ್ಯಾಹಾರಿ ವಿಠ್ಠಲರಾವ್'

ಅಂಗಾದ್ರ ನೀವು ನಮ್ಮ ಅಣ್ಮಂತಪ್ಪಾ ಅಲ್ಲಾ?

'ನಿಮ್ಮ ಹಣಮಂತ ದೇವರಾಣೆಗೂ ಅಲ್ಲ'

ಛೇ! ಎಂಥಾ ಜನಾರ್ರೀ ನೀವು, ಮೊದ್ಲನೆ ಏಳಾಕೇನಾಗಿತ್ತು ಧಾಡಿ?

'ನೋಡ್ರೀ ಮಿಸ್ಟರ್ ಮುಳ್ಳಗಸಿ, ನನಗ ಮಾತಾಡ್ಲಿಕ್ಕೆ ಅವಕಾಸಾನೆ ಕೊಡ್ಲಿಲ್ಲ ನೀವು'

ಅಲ್ಲಪಾ ಸಾಯಿತಿ, ಮೊದ್ಲನೆ ನಿನ್ನ ಎಸರ ಏಳಾಕೇನಾಗಿತ್ತು ಧಾಡಿ!

–ಫೋನ್ ಕಟ್ ಆಯಿತು.

★★★

ಟ್ರಿನ್.. ಟ್ರಿನ್.. ಟ್ರಿನ್.. .

'ಹಲೋ, ನಾನು ಸಾಹಿತಿ ವಿಠ್ಠಲರಾವ್ ಮಾತಾಡೋದು'

ಗೊತ್ತು, ಗೊತ್ತೂರಿ! ಸಾಹಿತಿ ವಿಠ್ಠಲರಾವ್ ಅಂತೇನೂ ಬೊಂಬಡಾ ಹೊಡಿಬೇಕಿಲ್ಲ!

'ಓಕೆ, ತಾವು ಯಾರಂತ ಮೊದ್ಲ ಹೇಳ್ರಿ'

ಅದ್ನ ತೊಗೊಂಡೇನ್ಮಾಡಾವ್ರು?

'ಯಾಕ್ ನಿಮ್ಗೆ ಹೆಸರಿಲ್ಲೇನು?'

ಸುಮ್ನೆ ನಾ ಹೇಳಿದಷ್ಟು ಕೇಳ್ರಿ, ಹೋಗಿ ಪಕ್ಕದ್ಮನೆ ಪಿಸಿ ರಾಮಣ್ಣನ ಕರೀರಿ!

'ನೀವೇ ಅವ್ರ ಮೊಬೈಲ್ಗೆ ಫೋನ ಮಾಡಬಹುದಲ್ಲಾ?'

ಅವ್ರು ಮೊಬೈಲ್ ಇಲ್ಲೆ ಬಿಟ್ಟ ಹೋಗ್ಯಾರ!

'ಅದಕ್ಕ ನಾನೇನ್ಮಾಡ್ಲಿ?'

ರಾಮಣ್ಣನ ಕರ್ಕೊಂಡು ಬರಬೇಕು, ಅಷ್ಟೇ!

'ಅವ್ರ ಮನೇಲಿ ಹುಲಿಯಂಥ ನಾಯಿ ಅದೆ, ಗೊತ್ತೇನು?'

ಹೋಗ್ಬೇಕು ಅಂದ್ರೆ ಹೋಗ್ಬೇಕು, ಮ್ಯಾಟರ್ ಅರ್ಜಂಟದಾ!

'ನನಗ್ ಆರ್ಡರ್ ಮಾಡಾಕ ತಾವ್ಯಾರು?'

ರ್ರೀ, ನಾನು ಎಸ್ಸೈ ಪ್ರಭಾಕರ, ಸ್ಟೇಷನ್‌ದಿಂದ ಮಾತಾಡ್ತಿರೋದು!

'ಹೌ.. ಹೌ.. ಹವುದಾ ಸ್ಸರ !

ಆಯಿತ್ರೀ ಸ್ಸರ, ಈಗ್ಲೆ ಹೋಗ್ತೀನಿ!

★★★

ಟ್ರಿನ್.. ಟ್ರಿನ್.. ಟ್ರಿನ್..

'ಹಲೋ..'

ಹಾಯ್, ಇದು ಸಾಹಿತಿ ವಿಠ್ಠಲರಾಯರ ಮನೇನಾ?

'ಹೌದು ಸರ್.., ನಾನೇ ಮಾತಾಡ್ತಿರೋದು, ತಾವು..?'

ನನಗ್ಯಾಕ್ರಿ ಅಂಕಲ್ ಹೀಗೆಲ್ಲಾ ತಾವು ಗೀವು ಅಂತ..!

'ಅಂದ್ರೆ ತಾವು?'

ನಾನ್ರೀ ಅಂಕಲ್ ಇಶಾ, ನಿಮ್ಮ ಮಗಾ ವಿರೂಪಾಕ್ಷ ಫ್ರೆಂಡ್!

'ಅದಕ್ಕೀಗೇನ್ಮಾಡ್ಬೇಕಮ್ಮಾ?'

ಅರ್ಜಂಟ್ ಅವ್ನ ಕರೀರಿ ಅಂಕಲ್!

'ಯಾಕ್ ಕರೀಬೇಕಮ್ಮಾ?'

ನಿಮ್ ಮುಂದೆ ಅದ್ನೆಲ್ಲ ಹೇಳಾಕ ಆಗಂಗಿಲ್ರೀ ಅಂಕಲ್!

'ಮತ್ತೇನ ಮಾಡ್ಬೇಕಮ್ಮಾ?'

ಮೊದ್ಲು ವಿರೂಪಾಕ್ಷಿಗೆ ಒಂದ್ ಮೊಬೈಲ್ ಕೊಡ್ಸಿ ಅಂಕಲ್!

★★★

ಟ್ರಿನ್.. ಟ್ರಿನ್.. ಟ್ರಿನ್..

'ಹಲೋ'

ಇಜ್ ಇಟ್ ಪ್ರೊಫೆಸರ್ ವಿಠ್ಠಲರಾವ್?

'ಎಸ್, ನೀನಾರು ಮರಿ ಮಾತಾಡೋದು?'

ನಾನು ವನಿತಾ ಸಮಾಜ ಸೆಕ್ರೆಟ್ರಿ ಸರಸೂ!

'ಸ್ಸಾರಿ ಮೇಡಂ, ಗೊತ್ತಾಗ್ಲಿಲ್ಲಾ, ಯಾರೊ ಸಣ್ಣ ಹುಡ್ಗಿ ಇರಬಹುದು ಅನ್ಕೊಂಡೆ..'

ಓಹೋ ನನ್ ವಾಯಿಸ್ ಅಷ್ಟೂ ಸ್ವೀಟಾ ಸರ್!

'ಹಿ.. ಹಿ..ಹೀ..'

ಫ್ರೈಡ್ ರೈಸಿಗೆ ಓನಿಯನ್ ಇರಬೇಕಾ ಅಂತ ಕೇಳೂದದ, ನಿಮ್ಮಿಸೆಸ್‌ನ ಕರೀರಿ!

'ನಮ್ಮನೇಲಿ ಅಡುಗೆ ಮಾಡೋದೆ ನಾನು, ನನ್ನ ಕೇಳ್ರೀ..'

ಅಯ್ಯೋ! ನಿಮ್ಗೊತ್ತಾಗೊಲ್ಲ, ಸುಮ್ನೇ ಆಕೀನ ಕರೀರಪಾ!

★★★

ಟ್ರಿನ್.. ಟ್ರಿನ್.. ಟ್ರಿನ್..

'ಹಲೋ ನಾನು ಸಾಹಿತಿ ವಿಠ್ಠಲರಾವ ಮಾತಾಡೋದು, ತಮಗೆ ಯಾರನ್ನು ಕರೀಬೇಕು?'

ಯಾರೂ ಇಲ್ಲಾ, ತಾವೇ ಬೇಕಾಗಿತ್ತು ಸ್ಸರಾ!

'ನಾನೇ ಬೇಕಾಗಿತ್ತಾ?'

ಹೌದ್ರೀ ಸ್ಸರ್, ತಮ್ಮ ಹತ್ರಾನೆ ಕೆಲ್ಸಿತ್ತು!

'ನಿಜವಾಗಿಯೂ ನಾನೇ ಬೇಕಾಗಿತ್ತಾ?'

ಹೂಂ ಸ್ಸರ್!

'ರಾಂಗ್ ನಂಬರ್!'